**RGRHCL**

**ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ**
**(ಕರ್ನಾಟಕ ಸರ್ಕಾರದ ಉದ್ದಿಮೆ)**
ನಂ. 1,2,3,4,ಐ.ಟಿ.ಪಾರ್ಕ್, 1ನೇ ಮಹಡಿ, 4ನೇ ಮುಖ್ಯರಸ್ತೆ, ರಾಜಾಜಿನಗರ ಕೈಗಾರಿಕಾ ಪ್ರದೇಶ, ರಾಜಾಜಿನಗರ, ಬೆಂಗಳೂರು – 560 044.

<table>
<tr><td>1.</td><td>ಯೋಜನೆಯ ಹೆಸರು</td><td>ಬಸವ ವಸತಿ ಯೋಜನೆ<br>(ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಗುಡಿಸಲುವಾಸಿಗಳಿಗೆ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ವಸತಿ ಕಲ್ಪಿಸುವ ಯೋಜನೆ.)</td></tr>
<tr><td>2.</td><td>ಪ್ರತಿ ಮನೆಗೆ ಆರ್ಥಿಕ ಸಹಾಯ</td><td>ಗರಿಷ್ಠ ರೂ. 1,50,000/- (ಸರ್ಕಾರದ ಸಹಾಯಧನ, ಬ್ಯಾಂಕ್ ಸಾಲ ಮತ್ತು ಫಲಾನುಭವಿಯ ವಂತಿಗೆ ಸೇರಿ)<br>(ಆರ್ಥಿಕ ಸಹಾಯ ಒದಗಿಸುವ ವಿಧಾನಗಳು: (ವಿ.ಸೂ. ಸಾಲ ಅಥವಾ ಸಹಾಯಧನದ ಮೊತ್ತದ ಮಿತಿಯನ್ನು ಸರ್ಕಾರವು ಆಗಿಂದ್ದಾಗೆ ನಿಗದಿಪಡಿಸಬಹುದಾದ ಮಾರ್ಪಾಡುಗಳಿಗೆ ಒಳಪಟ್ಟಿರುತ್ತದೆ.)
<table>
<tr><th>ಕ್ರ.ಸಂ.</th><th>ಅನುದಾನದ ಮೂಲ</th><th>ಅನುದಾನದ ವಿವರ (ರೂ.ಗಳಲ್ಲಿ)</th></tr>
<tr><td>1</td><td>ರಾಜ್ಯ ಸರ್ಕಾರದ ಸಹಾಯಧನ (ಎಲ್ಲಾ ವರ್ಗದ ಫಲಾನುಭವಿಗಳಿಗೆ)</td><td>1,20,000.00</td></tr>
<tr><td>2</td><td>ಸ್ಥಳೀಯ ಬ್ಯಾಂಕುಗಳಿಂದ ಡಿ.ಆರ್.ಐ. ಯೋಜನೆಯಡಿಯಲ್ಲಿ ಕನಿಷ್ಟ ಸಾಲ ಅಥವಾ ಫಲಾನುಭವಿಯ ಸ್ವಂತ ವಂತಿಕೆ.</td><td>30,000.00</td></tr>
</table></td></tr>
<tr><td>3.</td><td>ಡಿ.ಆರ್.ಐ.ಯಡಿ ಸಾಲ & ಬಡ್ಡಿಯ ದರ</td><td>ಈ ಯೋಜನೆಯಡಿ ಸ್ಥಳೀಯ ಬಾಂಕಿನಿಂದ ರೂ. 30000/-ದವರೆಗೆ 4% ವಾರ್ಷಿಕ ಬಡ್ಡಿದರದಲ್ಲಿ ಡಿ.ಆರ್.ಐ.ಯಡಿಯಲ್ಲಿ ಸಾಲವನ್ನು ಆಯ್ಕೆಯಾದ ಫಲಾನುಭವಿಗಳು ಪಡೆದುಕೊಳ್ಳಲು ಅವಕಾಶವಿರುತ್ತದೆ.</td></tr>
<tr><td>4.</td><td>ಫಲಾನುಭವಿಗಳ ಆಯ್ಕೆ</td><td>ಈಗಾಗಲೇ ಸಮೀಕ್ಷೆಯಲ್ಲಿ ಕಂಡುಬಂದಿರುವ ಗುಡಿಸಲುವಾಸಿಗಳ ಪಟ್ಟಿ ಹಾಗೂ ವಸತಿ ರಹಿತರ ಪಟ್ಟಿ ಹಾಗೂ ಆ ಪಟ್ಟಿಯಲ್ಲಿ ಇನ್ನೂ ಸೇರ್ಪಡೆ ಆಗದೇ ಇರುವ ನೈಜ ಮತ್ತು ಅರ್ಹ ಅಭ್ಯರ್ಥಿಗಳನ್ನು ಸೇರಿಸಿ ಮತ್ತು ಅನರ್ಹ ಅಭ್ಯರ್ಥಿಗಳಿದ್ದರೆ ಅಂತಹವರನ್ನು ಪಟ್ಟಿಯಿಂದ ತೆಗೆದು ಹಾಕಿ ಆಗಿಂದ್ದಾಗೆ ಪರಿಷ್ಕೃತ ಪಟ್ಟಿಯನ್ನು ಗ್ರಾಮ ಪಂಚಾಯಿತಿಗಳು ಗ್ರಾಮ ಸಭೆಗಳ ಮೂಲಕ ತಯಾರಿಸಲಾಗುತ್ತಿರುತ್ತದೆ. ಇಂತಹ ಪರಿಷ್ಕೃತ ಪಟ್ಟಿಯಲ್ಲಿ ಇರುವ ಫಲಾನುಭವಿಗಳನ್ನು ಮಾತ್ರ ನಿಯಮಾನುಸಾರ ಕರೆಯಲಾದ ಗ್ರಾಮಸಭೆಗಳಲ್ಲಿ ಅರ್ಹ ವಸತಿರಹಿತರುಗಳು ನಿಗದಿಪಡಿಸಿದ ವರ್ಗಾವಾರು ಗುರಿಗಿಂತ ಅಧಿಕವಾಗಿದ್ದಲ್ಲಿ ಲಭ್ಯವಿರುವ ಅರ್ಹ ವಸತಿ ರಹಿತರುಗಳ ಪಟ್ಟಿಯಿಂದ ಲಾಟರಿ ಎತ್ತುವ ಮೂಲಕ ಫಲಾನುಭವಿಗಳನ್ನು ಗ್ರಾಮಸಭೆ ಮೂಲಕ ಆಯ್ಕೆ ಮಾಡಿ ಪಟ್ಟಿಗೆ ಜಾಗೃತಿ ಸಮಿತಿಯ ಅನುಮೋದನೆ ಪಡೆದ ನಂತರ ಸಂಬಂಧಪಟ್ಟ ತಾಲ್ಲೂಕುಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಯ ಅನುಮೋದನೆಯೊಂದಿಗೆ ನಿಗಮವು ಅನುಮೋದನೆ ನೀಡಿ ಅನುಷ್ಠಾನಗೊಳಿಸಲಾಗುವುದು.</td></tr>
<tr><td>5.</td><td>ಯೋಜನೆಯ ಅನುಷ್ಠಾನ :</td><td>• ಪ್ರತಿ ವರ್ಷ ಗುರಿ ನಿಗದಿಪಡಿಸಲಾಗುವುದು<br>• ಆನ್‌ಲೈನ್‌ನಲ್ಲಿ ವಸತಿ ರಹಿತರು ಮತ್ತು ಗುಡಿಸಲುವಾಸಿಗಳ ವಿವರಗಳನ್ನು ನಮೂದಿಸಲು ಅವಕಾಶವಿದ್ದು ಈ ಪಟ್ಟಿಯಲ್ಲಿರುವ ವಸತಿ ರಹಿತರನ್ನು ಮಾತ್ರ ಪರಿಗಣಿಸುವುದು<br>• ಗ್ರಾಮಸಭೆಗಳಲ್ಲಿ ಗುರಿಗನುಗುಣವಾಗಿ ಫಲಾನುಭವಿಗಳನ್ನು ಲಾಟರಿ ಮೂಲಕ ಆಯ್ಕೆಗೊಳಿಸಲಾಗುವುದು<br>• ಗ್ರಾಮಸಭೆ ನಡೆದ ಬಗ್ಗೆ ಠರಾವು ಮತ್ತು ವಿಡಿಯೋ ಚಿತ್ರೀಕರಣಗೊಳಿಸುವುದು<br>• ಜಾಗೃತಿ ಸಮಿತಿಯ ಅನುಮೋದನೆ.<br>• ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಯಲ್ಲಿ ಪರಿಶೀಲನೆ ಹಾಗೂ ಡಿಜಿಟಲ್ ಸಹಿ ನೀಡುವ ಮೂಲಕ ಪಟ್ಟಿಗೆ ಅನುಮೋದನೆ</td></tr>
<tr><td>6.</td><td>ಜಿ.ಪಿ.ಎಸ್. ತಂತ್ರಜ್ಞಾನ ಅಳವಡಿಕೆ :</td><td>ನಿಗಮವು ಮೊಟ್ಟ ಮೊದಲಬಾರಿಗೆ ವಸತಿ ಯೋಜನೆಯಡಿಯಲ್ಲಿ ಅವ್ಯವಹಾರವನ್ನು ತಡೆಗಟ್ಟಲು ಹಾಗೂ ಸರ್ಕಾರದ ಹಣ ದುರುಪಯೋಗವಾಗದಂತೆ ನೋಡಿಕೊಂಡು ಫಲಾನುಭವಿಗಳಿಗೆ ವಸತಿ ಸೌಕರ್ಯವನ್ನು ಪಾರದರ್ಶಕತೆಯ ಮೂಲಕ ನೀಡಲು ಈ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದೆ. ಈ ತಂತ್ರಜ್ಞಾನದ ಅನುಷ್ಠಾನ ಇಂತಿವೆ.<br>▪ ಗ್ರಾಮಸಭೆಯಲ್ಲಿ ಆಯ್ಕೆಯಾದ ಫಲಾನುಭವಿಗಳ ಖಾಲಿ ನಿವೇಶನಗಳನ್ನು ಜಿಪಿಎಸ್‌ಗೆ ಅಳವಡಿಸುವುದು.<br>▪ ನಂತರ ಪ್ರತಿ ಮನೆಯ ಪ್ರಗತಿ ಹಂತಗಳಾದ ತಳಪಾಯ, ಕಿಟಕಿ, ಛಾವಣಿ ಹಾಗೂ ಪೂರ್ಣಗೊಂಡ ಮನೆಯ ಹಂತಗಳ ಛಾಯಾಚಿತ್ರವನ್ನು ಜಿ.ಪಿ.ಎಸ್ ಕ್ಯಾಮರಾ ಮೂಲಕ ಸೆರೆಹಿಡಿಯುವುದು.<br>▪ ನಿಗಮದ ಹಂತದಲ್ಲಿ ಎಲ್ಲಾ ಜಿಪಿಎಸ್ ಛಾಯಾಚಿತ್ರಗಳ ಪರಿಶೀಲಿಸುವುದು.<br>▪ ಅನರ್ಹ ಛಾಯಾಚಿತ್ರಗಳನ್ನು ತಿರಸ್ಕರಿಸಿ ಕ್ರಮ ವಹಿಸುವುದು<br>▪ ಅರ್ಹ ಛಾಯಾಚಿತ್ರಗಳ ಫಲಾನುಭವಿಗಳಿಗೆ ನಿಗಮದಿಂದ ತೆರೆಯಲಾದ ಖಾತೆಗೆ ನೇರ ಅನುದಾನ ಬಿಡುಗಡೆಗೊಳಿಸುವುದು.<br>ಈ ರೀತಿಯ ತಂತ್ರಜ್ಞಾನದಿಂದಾಗಿ ಆಗುತ್ತಿರುವ ಪ್ರಯೋಜನಗಳು:<br>▪ ಮನೆ ನಿರ್ಮಿಸದೇ ಅನುದಾನ ಕಬಳಿಸುವಿಕೆಗೆ ಕಡಿವಾಣ<br>▪ ಹಳೇ ಮನೆಗಳಿಗೆ ಹಾಗೂ ವಿಸ್ತರಣೆ ಮಾಡಿಕೊಳ್ಳುವ ಮನೆಗಳಿಗೆ ಅನುದಾನ ಕಡಿವಾಣ<br>▪ ವಾಸಯೋಗ್ಯೇತರಕ್ಕಾಗಿ ಉಪಯೋಗಿಸಿಕೊಳ್ಳುವ ಮನೆಗಳಿಗೆ ಅನುದಾನ ತಡೆ</td></tr>
</table>

| | | |
|---|---|---|
| | | ▪ ಒಮ್ಮೆ ವಸತಿ ಸೌಕರ್ಯ ಪಡೆದ ಫಲಾನುಭವಿಗಳ ಪುನರಾವರ್ತನೆಗೆ ತಡೆ.<br>▪ ಜಿಪಿಎಸ್ ಛಾಯಾಚಿತ್ರದ ಆಧಾರದ ಮೇಲೆ ಅನುದಾನ ಬಿಡುಗಡೆ.<br>▪ ಜಿಪಿಎಸ್ ಛಾಯಾಚಿತ್ರಗಳು ನಿಗಮದ ವೆಬ್‌ಸೈಟ್‌ನಲ್ಲಿ/ಮೊಬೈಲ್‌ನಲ್ಲಿ/ಐಪ್ಯಾಡ್‌ಗಳಲ್ಲಿ ವೀಕ್ಷಿಸಲು ಲಭ್ಯ.<br>▪ ಹಣದ ದುರ್ಬಳಕೆಗೆ ತಡೆ. |
| 7. | ಅರ್ಹತೆ ಮತ್ತು ಷರತ್ತುಗಳು | 1. ಫಲಾನುಭವಿಯು ಯಾವುದೇ ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿರಬೇಕು ಮತ್ತು ಗ್ರಾಮಸಭಾದ ನಿವೇಶನ ರಹಿತ/ವಸತಿರಹಿತರ ಪಟ್ಟಿಯಲ್ಲಿ ಸೇರಿರಬೇಕು.<br>2. ಫಲಾನುಭವಿಯು ಆರ್ಥಿಕವಾಗಿ ಹಿಂದುಳಿದಿದ್ದ, ವಾರ್ಷಿಕ ಆದಾಯವು ಬಡತನ ರೇಖೆಗಿಂತ ಕೆಳಗಿರುವವರಿಗೆ ನಿಗದಿಪಡಿಸಿರುವ ಮಿತಿಗಿಂತ ಕಡಿಮೆ ಇರಬೇಕು (ಪ್ರಸ್ತುತ ಮಿತಿಯು ವಾರ್ಷಿಕ ರೂ. 32000/- ಆಗಿರುತ್ತದೆ.)<br>3. ಮನೆ/ನಿವೇಶನ ಹಕ್ಕುಪತ್ರವನ್ನು ಹೆಂಡತಿ ಹೆಸರಿನಲ್ಲಿ ವಿತರಿಸಬೇಕು. ಒಂದು ವೇಳೆ ಅವಿವಾಹಿತ ಪುರುಷರು ಮತ್ತು ವಿಧುರರು ಆಯ್ಕೆಯಾಗಿದ್ದಲ್ಲಿ ಅವರ ಹೆಸರಿನಲ್ಲಿ ಹಕ್ಕುಪತ್ರ ವಿತರಿಸಬಹುದು.<br>4. ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ವಸತಿ ಸೌಲಭ್ಯ ಪಡೆದಿರಬಾರದು.<br>5. ನಿಯಮಾನುಸಾರ ಪರಿಶಿಷ್ಟ ಜಾತಿ/ ಪಂಗಡದವರಿಗೆ ಮೀಸಲಾತಿ ಇರುತ್ತದೆ.<br>6. **ಮನೆಗಳ ವಿಸ್ತೀರ್ಣ ಮತ್ತು ವಿನ್ಯಾಸ :** ಕನಿಷ್ಟ 250 ಚದರ ಅಡಿಗಳು ಹಾಗೂ ಗರಿಷ್ಟ 700 ಚದರ ಅಡಿಗಳು ನೆಲಗಟ್ಟು ವಿಸ್ತೀರ್ಣ ಇರುವಂತೆ ಮನೆ ನಿರ್ಮಿಸಬೇಕು. ಇದಕ್ಕಾಗಿ ಯಾವುದೇ ನಕ್ಷೆ ಅಥವಾ ವಿನ್ಯಾಸ ನಿಗದಿಪಡಿಸಿರುವುದಿಲ್ಲ. ಆದರೆ ಫಲಾನುಭವಿಗಳಿಗೆ ಅನುಕೂಲವಾಗುವಂತೆ ಮಣ್ಣು, ಹವಾಗುಣ, ಪರಿಸ್ಥಿತಿ, ಸ್ಥಳೀಯವಾಗಿ ಲಭ್ಯವಿರುವ ಸಾಮಾಗ್ರಿಗಳ ಬಳಕೆ ಇತ್ಯಾದಿ ಅಂಶಗಳನ್ನು ಪರಿಗಣಿಸಿ ಪ್ರದೇಶವಾರು ಮತ್ತು ಬದಲಿ ವಿನ್ಯಾಸಗಳನ್ನು ಅನುಸರಿಸಬಹುದು. ಮನೆ ನಿರ್ಮಾಣದ ಪ್ರತಿ ಹಂತದಲ್ಲಿಯೂ ಫಲಾನುಭವಿಯು ಸಕ್ರಿಯವಾಗಿ ಪಾಲ್ಗೊಂಡು ಒಳ್ಳೆಯ ಗುಣಮಟ್ಟದ ಹಾಗೂ ಹೆಚ್ಚಿನ ಸೌಲಭ್ಯಗಳನ್ನು ಹೊಂದಬಹುದು.<br>7. ಇಂದಿರಾ ಆವಾಸ್ ಯೋಜನೆಯಲ್ಲಿ ಇರುವಂತೆ ಸುಧಾರಿತ ಒಲೆ (ಚೂಲ್ಲಾ) ನೈರ್ಮಲೀಕರಣ, ನಕ್ಷೆ ಸುಧಾರಿತ ಕಟ್ಟಡ ಉಪಕರಣಗಳ ಬಳಕೆ ಇತ್ಯಾದಿ ಅಂಶಗಳು ಹೆಚ್ಚುವರಿಯಾಗಿ ಯತಾವತ್ ಈ ಯೋಜನೆಗೂ ಸಹಾ ಅನ್ವಯಿಸಬಹುದಾಗಿದೆ.<br>8. ಫಲಾನುಭವಿಯು ಸಾಲದ ಮೊತ್ತವನ್ನು ಬ್ಯಾಂಕಿನ ನಿಯಮಗಳ ಅನುಸಾರ ತೀರಿಸಲು ಒಪ್ಪಬೇಕಾಗಿರುತ್ತದೆ.<br>9. ಫಲಾನುಭವಿಯು ತನ್ನ ಪಾಲಿನ ವಂತಿಗೆಯ ಹಣವನ್ನು ಭರಿಸಲು ಸಿದ್ಧರಿರಬೇಕು.<br>10. ಸಾಲದ ಕಂತುಗಳನ್ನು ತೀರಿಸಲು ನಿಗದಿಪಡಿಸಿದ ಬ್ಯಾಂಕುಗಳಲ್ಲಿ ಉಳಿತಾಯ ಖಾತೆ ಹಾಗೂ ಜನತಾ / ಪಿಗ್ಮಿ ಖಾತೆ ತೆರೆದಿರಬೇಕು ಅಥವಾ ಗ್ರಾಮ ಪಂಚಾಯಿತಿ ಮೂಲಕ ಮರುಪಾವತಿ ಮಾಡಬಹುದು.<br>11. ಸಾಲ ಮರುಪಾವತಿ ಆಗುವವರೆಗೆ ಫಲಾನುಭವಿಗೆ ಕೇವಲ ಮನೆಯ ಸ್ವಾಧೀನವನ್ನು ಉಪಯೋಗಕ್ಕೆ ಮಾತ್ರ ಕೊಡಲಾಗುವುದು ಹಾಗೂ ಸಾಲ ತೀರಿದ ನಂತರ ಸ್ವತ್ತಿನ ಒಡೆತನವನ್ನು ವರ್ಗಾವಣೆ ಮಾಡಲಾಗುವುದು.<br><br>ಒಟ್ಟಾರೆ ಆಗಿಂದ್ದಾಗೆ ಸರ್ಕಾರವು ಬಸವ ವಸತಿ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ವಿಧಿಸಬಹುದಾದ ನಿಯಮ ಮತ್ತು ಷರತ್ತುಗಳನ್ನು ತಪ್ಪದೇ ಪಾಲಿಸಬೇಕು. |

ವಿ.ಸೂ : ಚೆಕ್ ಲಿಸ್ಟ್ : (ಒದಗಿಸಬೇಕಾದ ದಾಖಲೆಗಳು – ಸಂಕ್ಷಿಪ್ತ)

**ಫಲಾನುಭವಿಯಿಂದ :**

1. ವಸತಿಗಾಗಿ ನಿಗದಿತ ಅರ್ಜಿ (ನಮೂನೆ-1).
2. ನಿವೇಶನ/ಮನೆಯನ್ನು ನಿಗಮದ ಪರವಾಗಿ ಅಡಮಾನ ಪತ್ರ ಬರೆದುಕೊಡಬೇಕು (ನಮೂನೆ-3ಎ)
3. ಜಾತಿ ಪ್ರಮಾಣ ಪತ್ರ / ಆದಾಯ ಪ್ರಮಾಣ ಪತ್ರ.
4. ಗುರುತಿನ ಪ್ರಮಾಣ ಪತ್ರ
5. ನಿವೇಶನದ ಖಾತಾ ಪತ್ರ
6. ಗ್ರಾಮ ಪಂಚಾಯಿತಿ ವತಿಯಿಂದ ಕಟ್ಟಡ ಲೈಸೆನ್ಸ್
7. ವಸತಿ ಯೋಜನೆಯ ಯಶಸ್ವಿ ಅನುಷ್ಠಾನದ ಬಗ್ಗೆ ಸಂಬಂಧಿಸಿದ ಇತರೆ ಮಾಹಿತಿ ಇತ್ಯಾದಿ.

**ಹೆಚ್ಚಿನ ವಿವರಗಳಿಗೆ ಈ ಕೆಳಕಂಡವರನ್ನು ಸಂಪರ್ಕಿಸಿ:**

1. ರಾಜೀವಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಐಟಿ ಪಾರ್ಕ್, ರಾಜಾಜಿನಗರ ಕೈಗಾರಿಕಾ ಪ್ರದೇಶ, ರಾಜಾಜಿನಗರ ಬೆಂಗಳೂರು – 560010. (ದೂರವಾಣಿ 23148888, ಫ್ಯಾಕ್ಸ್ 23145085)
   ಈ-ಮೇಲ್ rgrhcl@rediffmail.com , ವೆಬ್‌ಸೈಟ್ : http://ashraya.kar.nic.in
2. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಜಿಲ್ಲಾಧಿಕಾರಿಗಳು, ಆಯಾಯ ಸಂಬಂಧಿಸಿದ ಜಿಲ್ಲೆಗಳು
3. ಸಂಬಂಧಪಟ್ಟ ತಾಲ್ಲೂಕು ಪಂಚಾಯತಿ ಕಾರ್ಯಾ ನಿರ್ವಹಣಾಧಿಕಾರಿಗಳು.
4. ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು.

**********